ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಅಧ್ಯಕ್ಷರೇ, ಉತ್ತರವೇನೋ ಸ್ವಲ್ಪಮಟ್ಟಿಗೆ ಸಮಂಜಸವಾಗಿದೆ. ಆದರೆ Statement of Expenditure incurred Institution wise is enclosed. ಎಂದು ಹಾಕಿದ್ದೀರಿ. ಇದರಲ್ಲಿ ಖರ್ಚುಮಾಡುವಾಗ, ಯಾವಯಾವ ಬಾಬಿಗೆ ಖರ್ಚು ಮಾಡುತ್ತಿದ್ದೀರಿ. ಯಾವಯಾವ ಸಬ್ಜಕ್ಟ್ ಮೇಲೆ ಎಂದು ಏನಾದರೂ ಒಂದು ನಿಗದಿಯಾಗಿರತಕ್ಕಂಥ ತೀರ್ಮಾನ ತೆಗೆದುಕೊಂಡಿದ್ದೀರಾ ? ನಿಮಗೆ ತಿಳಿದ ವಿಷಯಗಳಿಗೆ ಖರ್ಚು ಮಾಡುವುದು ಸರಿಯಲ್ಲ. ತಾವು ಶಾಸನ ಸಭೆಯ ಸದಸ್ಯರ ಸಮಿತಿಯನ್ನಾಗಲೀ, ಎಂ.ಎಲ್.ಎ.ಗಳನ್ನಾಗಲೀ ಕರೆದು ಅವರ ಸಲಹೆ ತೆಗೆದುಕೊಂಡು ಈ ಹಣವನ್ನು ಖರ್ಚು ಮಾಡುವುದು ಅವಶ್ಯ ಇದೆ. ಇದಕ್ಕೆ ತಾವು ಒಪ್ಪುತ್ತೀರೆಂದು ತಿಳಿದುಕೊಂಡಿದ್ದೇನೆ.

ಶ್ರೀ ಬಿ. ಆರ್. ಯಾವಗಲ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ರಾಜ್ಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಹಾಗೆ, ಈ ಹಣವನ್ನು ಖರ್ಚು ಮಾಡುವುದು ವ್ಯವಸ್ಥಿತವಾಗಿ ಆಗಬೇಕು, ಆದನ್ನು ನಾನು ಒಪ್ಪುತ್ತೇನೆ. ಈ ಬಾಗಲೇ ಹಲವಾರು ಕಾರಣಗಳ ಮೇಲೆ, ಶಿಕ್ಷಣ ಮತ್ತು ಆರ್ಥಿಕ ಸಹಾಯವನ್ನು ಹಾಗೂ ಜನರಲ್ ಆಗಿ ಅವರಿಗೆ ಕೊಡುವಂತಹ ಸಹಾಯವನ್ನು ಟಿ.ಡಿ.ಬಿ. ಮತ್ತು ಪಂಚಾಯ್ತಿಗಳ ಮುಖಾಂತರ ಕೊಡುತ್ತಿದ್ದೇವೆ. ಅದಲ್ಲದೆ, ಬೇರೆ ಬೇರೆ ಕಾರ್ಯಕ್ರಮಗಳ ಅಡಿಯಲ್ಲಿ ನಿಶ್ಚಿತವಾಗಿ ಇಷ್ಟು ಹಣವನ್ನು ಖರ್ಚು ಮಾಡಬೇಕೆಂದು ಹೇಳಿದೆ. ಮಾನ್ಯ ಸದಸ್ಯರು ಇನ್ನೂ ಹೆಚ್ಚಿನ ಸಲಹೆಗಳನ್ನು ಕೊಡುವುದಾದರೆ ಒಳ್ಳೆಯದು.

ಶ್ರೀ ಬಿ. ಬಸವಲಿಂಗಪ್ಪ.—ನಾನು ಮಾನ್ಯ ಸಚಿವರಿಂದ ಬೇರೆ ರೀತಿಯಾದಉತ್ತರವನ್ನು ನಿರೀಕ್ಷಣೆ ಮಾಡಿದ್ದೆ. ಇವತ್ತು ಹಳ್ಳಿಗಾಡುಗಳಲ್ಲಿ ಆರ್ಥಿಕ ಬದಲಾವಣೆ ಆಗಬೇಕು. ಸ್ಮಾಲ್ ಇಂಡಸ್ಟ್ರೀಸ್, ಟ್ರೇಡರ್ಸ್ ಮತ್ತು ಉದ್ಯಮಿಗಳಿಗೆ ಅಷ್ಟಷ್ಟು ಹಣ ಸಹಾಯ ಮಾಡಿದರೆ, ಉದ್ಯಮಗಳನ್ನು ಪ್ರಾರಂಭ ಮಾಡುತ್ತಾರೆ. ನಿಮ್ಮಲ್ಲಿ ಹಲವಾರು ಯೋಜನೆಗಳು ಇವೆ. ಬಟ್ಟೆ ತಂದು ಕೊಡುವುದು, ಸ್ಲೇಟ್ ತಂದುಕೊಡುವುದರಿಂದ ಹಣ ಅಪವ್ಯಯವಾಗುತ್ತಿದೆ. ಆರ್ಥಿಕ ವ್ಯವಸ್ಥೆ ಬದಲಾವಣೆ ಆಗಬೇಕು, ಸಾಮಾಜಿಕ ವ್ಯವಸ್ಥೆ ಬದಲಾವಣೆ ಆಗಬೇಕು. ಆದರಂತೆ ಈ ಹಣದ ವಿಷಯದಲ್ಲೂ ಬದಲಾವಣೆ ಆಗುವುದಕ್ಕೆ ಪ್ರಯತ್ನ ಮಾಡಬೇಕು. ಇದಕ್ಕಾಗಿ ಕೆಲವು ಸದಸ್ಯರಿಂದ ಸಲಹೆಗಳನ್ನು ತೆಗೆದುಕೊಂಡು, ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ಆರ್. ಯಾವಗಲ್.— ಮಾಡುತ್ತೇನೆ.

ರಾಜ್ಯದಲ್ಲಿ ಆಹಾರ ಧಾನ್ಯಗಳ ಬೆಳೆಗೆ ಕಡ್ಡಾಯವಾಗಿ ವಿಮೆ ಜಾರಿಗೊಳಿಸಲಾಗಿರುವ ಬಗೆಗೆ.

ಳಳಲ. ಶ್ರೀ ಜಿ. ಎಸ್. ಆಚಾರ್ (ಬೈಂದೂರು).— ಮಾನ್ಯ ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ೧೯೮೫–೮೬ನೇ ವರ್ಷದಿಂದ ಆಹಾರ ಧಾನ್ಯಗಳ ಬೆಳೆಗೆ ಕಡ್ಡಾಯವಾಗಿ ಬೆಳೆ ವಿಮೆ ಜಾರಿಗೊಳಿಸಲಾಗಿದ್ದು ಆ ಯೋಜನೆಯಂತೆ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ಮಂದಿ ರೈತರಿಂದ, ಎಷ್ಟು ಎಕರೆ ಕೃಷಿಗೆ ಎಷ್ಟೆಷ್ಟು ವಿಮಾ ಮಂತಿಗೆಯನ್ನು ಸಂಗ್ರಹಿಸಲಾಗಿದೆ ?

ಆ) ಈ ಯೋಜನೆಯಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ರೈತರಿಗೆ ಪರಿಹಾರ ಸಿಕ್ಕಿದೆ ಅದರ ಜಿಲ್ಲಾವಾರು ಹಾಗೂ ಬೆಳೆವಾರು ವಿವರಗಳನ್ನೊದಗಿಸುವುದು.

ಶ್ರೀ ಎಮ್. ಪಿ. ಪ್ರಕಾಶ (ಕೃಷಿ ರಾಜ್ಯ ಸಚಿವರು).—

ಅ) ವಿವರಗಳನ್ನು ಲಗತ್ತಿಸಿದ ಪಟ್ಟಿಯಲ್ಲಿ ಕೊಡಲಾಗಿದೆ.

ಆ) ಪರಿಹಾರ ಒದಗಿಸಲು ಯೋಜನೆಯ ಪ್ರಕಾರ ತೆಗೆದುಕೊಳ್ಳಬೇಕಾದ ಎಲ್ಲಾ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ.

STATEMENT SHOWING THE PROGRESS OF ACHIEVEMENT UNDER COMPREHENSIVE CROP INSURANCE SCHEME.

DURING 1985-86 (KHARIF)

Sl. No.	Districts.	No. of farmers covered.	Area in Hectare.	Sum Insured Rs. Ps.	Premium collected. Rs. Ps.
1	2	3	4	5	6
1.	Mysore	1892	2099.57	56,75,388.50	1,11,145.90
2.	Shimoga	6375	11294.31	2.17,97,299.75	4,35,612.75
3.	Chickmagalur	1993	4311.46	91,88,963.00	1,71,109.50
4.	Gulbarga	3451	14278.11	76,22,945.82	81,845.70
5.	Bijapur	777	1843.74	21,68,309.50	31,195.97
6.	Bidar	8068	16997.34	84,78,269,00	1,22,757.25
7.	Dharwar	8362	13190.73	2,00,36,188.39	3,45,838.89
8.	Belgaum	1843	1883.48	38,83,758.82	58,531.57
9.	Bellary	5378	8569.76	2,03,26,308.00	3,44,174.52
10.	Chitradurga	6709	13285.57	2.78,01,653.25	5,31,512.10
11.	Raichur	6379	11010.82	2,68,30,430.85	4.85,265.63
12.	Tumkur	3527	14764.74	1,16,47,828.00	1,93,325.78
13.	Bangalore	359	402.77	7,24,010.50	14,411.56
14.	Hassan	1686	2716.48	50,97,593.60	1,04,513.05
15.	Coorg	1186	3159.02	82,74,865.50	1,65,702.45
16.	Kolar	817	1163.23	22,63,113.00	26,299.70
17.	Uttara Kannada	522	1267.67	18,75,887.00	37,358.74
18.	Dakshina Kannada	869	1769.23	39,16,650.00	78,342.00
	Total.	60193	124008.03	18.76,09,462.39	33,38,943.06

ಶ್ರೀ ಜಿ. ಎಸ್. ಆಚಾರ್ (ಬೈಂದೂರು).— ಮಾನ್ಯ ಅಧ್ಯಕ್ಷರೇ, ಲಗತ್ತಿಸಿದ ಪಟ್ಟಿಯಲ್ಲಿ ಪ್ರೀಮಿಯಂ ಕಲೆಕ್ಟೆಡ್ ಮಾತ್ರ ಇದೆ. ಇಲ್ಲಿಯವರೆಗೂ ರಾಜ್ಯದ ರೈತರಿಗೆ, ಎಷ್ಟು ಮಂದಿಗೆ ಪರಿಹಾರ ಸಿಕ್ಕಿದೆ, ಎಷ್ಟು ರೈತರಿಗೆ ಸಿಗುವ ಸಂಭವ ಇದೆ. ಇದು ರೈತರಿಗೆ ಅಡಕವಾದ ಬೆಳೆ ವಿಮೆ ಅಲ್ಲ, ಸಾಲದ ವಿಮೆಯಾಗಿದೆ. ಕೋ-ಆಪರೇಟಿವ್ ಸಾಲವನ್ನು ಕಡ್ಡಾಯವಾಗಿ ವಸೂಲ್ಮಾಡುತ್ತಿದ್ದಾರೆ. ಹಾಗೂ ಬ್ಯಾಂಕಿನಿಂದ ಪಡೆದ ಸಾಲಗಳನ್ನು ಇಷ್ಟರತನಕ ವಸೂಲ್ಮಾಡಿಲ್ಲ. ಕೋ—ಆಪರೇಟಿವ್ ಸೆಕ್ಟಾರ್‌ನಲ್ಲಿ ಸಾಲ ಮಾಡಿದವರು ಯಾವ ಅಪರಾಧ ಮಾಡಿದ್ದಾರೆ. ಈ ಯೋಜನೆಯಲ್ಲಿ ರಾಜ್ಯ ಸರ್ಕಾರದ ಪಾಲುಗಾರಿಕೆ ಕೂಡ ಇದೆ. ಇದನ್ನು ಕಡ್ಡಾಯವಾಗಿ ಜಾರಿಗೊಳಿಸಲು ಸರ್ಕಾರದವರು ಯಾವ ಕಾರ್ಯಕ್ರಮ ಕೈಗೊಳ್ಳುತ್ತಾರೆ ?

ಶ್ರೀ ಎಂ. ಪಿ ಪ್ರಕಾಶ್ (ಕೃಷಿ ರಾಜ್ಯಸಚಿವರು).-- ಮಾನ್ಯ ಅಧ್ಯಕ್ಷರೇ, ಫೆಬ್ರುವರಿ ತಿಂಗಳ ಅಂತ್ಯದವರೆಗೆ ಸುಮಾರು ೨೮ ಕೋಟಿ ರೂಪಾಯಿಯಷ್ಟು ವಿಮೆಯಾಗಿದೆ, ಇದಕ್ಕೆ ಸುಮಾರು ೪೭ ಲಕ್ಷ ರೂ ಪಾ ಯಿ ಯ ಷ್ಟು ಪ್ರೀಮಿಯಂ ಕ ಟ್ಟ ಲಾ ಗಿ ದೆ. ಇದಕ್ಕೆ ಸುಮಾರು ೭೧,೩೯೨ ಜನ ರೈತರು, ಇದರ ವತಿಯಿಂದ ಪ್ರೀಮಿಯಂ ಕಟ್ಟಿದ್ದಾರೆ. ಇವರೆಲ್ಲಾ ಬೆಳೆ ವಿಮೆ ಯೋಜನೆ ಅಡಿಯಲ್ಲಿ ಬರುತ್ತಾರೆ. ಈಗಾಗಲೇ ನಾವು ವಿವರಗಳನ್ನು ಕಳುಹಿಸಿ ಕೊಟ್ಟಿದ್ದೇವೆ. ೩೧-೧-೮೬ಕ್ಕೆ ಭತ್ತಕ್ಕೆ, ೧೫-೧೨-೮೬ಕ್ಕೆ, ಜೋಳಕ್ಕೆ, ೧೫-೧-೮೬ಕ್ಕೆ ರಾಗಿಗೆ, ೧೫-೧-೮೬ಕ್ಕೆ ನೆಲಗಡಲೆಗೆ, ನಾವು ಜನರಲ್ ಇನ್‌ಷೂರೆನ್ಸ್ ಕಂಪನಿಗೆ ಕಳುಹಿಸಿ ಕೊಟ್ಟಿದ್ದೇವೆ. ಕ್ರಾಪ್ ಕಟಿಂಗ್ ಎಕ್ಸ್‌ಪರಿಮೆಂಟ್ ಪ್ರಕಾರ, ಕೃಷ್ ಹೋಲ್ಡ್, ಈಲ್ಡ್‌ನ ಕೊನೇ ಹಂತ ಏನಿದೆ ಅದರ ನಿರ್ಧಾರದ ಮೇಲೆ ಈ ಹಣವನ್ನು ಕೊಡಬೇಕಾಗಿರುವುದರಿಂದ, ಈ ಹಂತದಲ್ಲಿ ಪರಿಹಾರವನ್ನು ಕೊಡತಕ್ಕಂತಾದ್ದು ಇಲ್ಲ. ಸ್ವಲ್ಪ ದಿವಸವಾದ ಮೇಲೆ ಈ ನಿರ್ಣಯ ಬರಬಹುದೆಂದು ನಾನು ಭಾವಿಸಿಕೊಂಡಿದ್ದೇನೆ. ಈ ವರ್ಷದಲ್ಲಿ ಲಾಭ ಆಗಬಹುದು. ಮಾನ್ಯ ಆಚಾರ್‌ರವರು ಪ್ರಸ್ತಾಪ ಮಾಡಿದಂತೆ, ಕಳೆದ ೪ ವರ್ಷಗಳಿಂದ, ಕರ್ನಾಟಕದಲ್ಲಿ ಬರಗಾಲ ಇರುವುದರಿಂದ, ಕಳೆದ ೫ ವರ್ಷದಲ್ಲಿ ಬಂದಿರತಕ್ಕಂಥ ಉತ್ಪನ್ನದ ಸರಾಸರಿ ತೆಗೆದುಕೊಂಡು, ೪ನೇ ವರ್ಷದ ತ್ರಿಷೋಲ್ಡ್ ಬೆಳೆಯನ್ನು ನಿರ್ಣಯ ಮಾಡುವುದಾಗಿದ್ದಾರೆ. ಬಹಳ ಕಡಿಮೆ ಪ್ರಮಾಣದಲ್ಲಿ ಬರುವುದರಿಂದ, ಪ್ರೀಮಿಯಂ ಕಟ್ಟಿದ ರೈತರಿಗೆ ಅನುಕೂಲ ಆಗುತ್ತದೋ, ಈಲ್ಲವೋ ತಿಳಿಯದು. ಇದು ಸಾಲದ ವಿಮೆಯಾಗುತ್ತದೆಯೇ ವಿನಹ, ಬೆಳೆ ವಿಮೆ ಆಗುವುದಿಲ್ಲ ಎನ್ನುವ ಭಯ ಇಡೆ. ಈ ವಿಚಾರವನ್ನು ಕೇಂದ್ರಸರ್ಕಾರಕ್ಕೂ ತಿಳಿಸಲಾಗಿದೆ.

ಪತ್ರಿಕಾ ಪ್ರತಿನಿಧಿಗಳ ಬಗ್ಗೆ

೨೮. ಶ್ರೀ ಕೆ.ಬಿ. ಕೋಳಿವಾಡ್.—ಮಾನ್ಯ ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಸುತ್ತೋಲೆ ಇದ್ದಾಗ್ಯೂ ಪತ್ರಿಕಾ ಪ್ರತಿನಿಧಿಗಳನ್ನು ಜಿಲ್ಲಾ ಕೌನ್ಸಿಲ್ ಸಭೆಗಳಿಗೆ ಸೇರಿಸುತ್ತಿಲ್ಲವೆಂಬುದು ನಿಜವೇ?

ಆ) ಹಾಗಿದ್ದಲ್ಲಿ, ಪತ್ರಿಕಾ ಪ್ರತಿನಿಧಿಗಳಿಗಿರುವ ಸ್ವಾತಂತ್ರ್ಯ ಹಕ್ಕುಗಳನ್ನು ಉಲ್ಲಂಘನೆ ಮಾಡಿದಂತಾಗಲಿಲ್ಲವೆ?

ಶ್ರೀ ಬಿ. ಆರ್. ಯಾವಗಲ್ (ಗ್ರಾಮಾಣಾವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಇಲ್ಲ. ಸರ್ಕಾರವು ಈವರೆವಿಗೂ ಸುತ್ತೋಲೆ ಹೊರಡಿಸಿಲ್ಲ.

ಆ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

ಶ್ರೀ ಕೆ.ಬಿ. ಕೋಳಿವಾಡ್.—ಮಾನ್ಯ ಅಧ್ಯಕ್ಷರೇ, ಸರ್ಕಾರದ ಸುತ್ತೋಲೆ ಪ್ರಕಾರ, ಪತ್ರಿಕಾ ಕರ್ತರಿಗೆ, ಜಿಲ್ಲಾಭಿವೃದ್ಧಿ ಸಮಿತಿಗಳಲ್ಲಿ ಮತ್ತು ಸ್ಕೇರ್‌ಸಿಟಿ ಸಭೆಯಲ್ಲಿ ಪ್ರವೇಶ ಕೊಡಬಾರದೆಂದು, ಸುತ್ತೋಲೆ ಹೋಗಿ, ಇಲ್ಲಿಯವರೆಗೂ ಯಾವ ಜಿಲ್ಲಾಭಿವೃದ್ಧಿ ಸಮಿತಿಗಳಲ್ಲೂ ಪ್ರವೇಶವನ್ನು ಅವರಿಗೆ ಕೊಡುತ್ತಿಲ್ಲ. ನಮ್ಮ ಜಿಲ್ಲೆಯಲ್ಲಿ ಇವರೇ ಜಿಲ್ಲಾಮಂತ್ರಿಗಳಾಗಿದ್ದಾರೆ. ಬರವಣಿಗೆಯ ಮೂಲಕ ಅವರಿಗೆ ನೋಟೀಸನ್ನು ಕೊಡುತ್ತಿಲ್ಲ. ಕೇವಲ ಫೋನಿನ ಮೂಲಕ ಹೇಳಿ ಅವರನ್ನು ಕರೆಸುತ್ತಿದ್ದಾರೆ.